**ದಿನಾಂಕ: 25.03.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಬಿ ಎನ್ ಎಂ ವಕೀಲರಿಂದಃ**

ನಾನು ಎಂ ಎ ಪದವಿದರನಾಗಿರುತ್ತೇನೆ. ನಾನು ಕಳೆದ 3 ತಿಂಗಳಿನಿಂದ ವ್ಯವಸಾಯ ಮಾಡಿಕೊಂಡು ಮನೆಯಲ್ಲಿಯೇ ವಾಸವಾಗಿರುತ್ತೇನೆ. ನನ್ನ ಹೆಸರಿನಲ್ಲಿ ವ್ಯವಸಾಯದ ಜಮೀನುಗಳು ಇರುವುದಿಲ್ಲ. ನಮ್ಮ ಒಟ್ಟು ಕುಟುಂಬದ ಹೆಸರಿನಲ್ಲಿವೆ. ನನ್ನ ತಂದೆಗೆ ಒಟ್ಟು 5 ಜನ ಮಕ್ಕಳಿದ್ದೇವೆ. ಅವರುಗಳಲ್ಲಿ 3 ಜನ ಗಂಡು ಮಕ್ಕಳು 2 ಹೆಣ್ಣು ಮಕ್ಕಳು ಇದ್ದಾರೆ. ನಮ್ಮ ಕುಟುಂಬಕ್ಕೆ ನಾಲ್ಕುವರೆ ಎಕರೆ ಜಮೀನು ಇದೆ. ಅದರ ಸರ್ವೆ ನಂಬರ 124/3 ಆಗಿರುತ್ತದೆ. ಆ ಆಸ್ತಿಯಲ್ಲಿ ನಮ್ಮ ಅಣ್ಣ ತಮ್ಮಂದರಿಗೆ ಹಿಸ್ಸೆ ಇದೆ. ಎಲ್ಲರಿಗೂ ಹಿಸ್ಸೆ ಆದ ನಂತರ ನನ್ನ ಪಾಲಿಗೆ ಸುಮಾರು 30 ಗುಂಟೆ ಜಮೀನು ಬರಬಹುದಾಗಿರುತ್ತದೆ. ಅ ಜಮೀನಿನಲ್ಲಿ ಈಗ ಅಡಿಕೆ ಫಸಲು ಇದೆ. 2020 ನೇ ಸಾಲಿನಲ್ಲಿ ಅಡಿಕೆ ಗಿಡಗಳನ್ನು ಹಾಕಿರುತ್ತೇನೆ. ನಾನು ಕಳೆದ ವರ್ಷದಿಂದ ಬೇರೆಯಾಗಿ ವಾಸವಾಗಿರುತ್ತೇನೆ. ಅದಕ್ಕೂ ಮೊದಲು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೆನು. ನಮ್ಮ ಒಟ್ಟು ಕುಟುಂಬದ ವ್ಯವಹಾರವನ್ನು ನಮ್ಮ ಅಣ್ಣನವರೇ ಮಾಡುತ್ತಾರೆ. ಸಾಮಾನ್ಯವಾಗಿ ಅಡಿಕೆ ಫಸಲು 5 ವರ್ಷದ ನಂತರ ಪ್ರಾರಂಭವಾಗುತ್ತದೆ, ನಾನು 2 ಎಕರೆ ಜಮೀನಿನಲ್ಲಿ ಅಡಿಕೆ ಫಸಲನ್ನು ಹಾಕಿರುತ್ತೇನೆ. ಅಡಿಕೆ ಬೆಳೆಯಲು ಬೋರವೆಲ್ ಹಾಕಿಸಿರುತ್ತೇವೆ. ಉಳಿದ ಜಮೀನಿನಲ್ಲಿ ಗೋವಿನ ಜೋಳ ಬೆಳೆಯುತ್ತೇವೆ. ನಮ್ಮ ಜಮೀನಿನಲ್ಲಿ ಅಡಿಕೆ ಫಸಲು ಇನ್ನೂ ಸಹ ಬರುತ್ತಿಲ್ಲ. ಸಾಕ್ಷಿಯು ಇತ್ತೀಚೆಗೆ ಪ್ರಾರಂಭವಾಗಿರುತ್ತದೆ ಎಂದು ಸ್ವತಃ ನುಡಿಯುತ್ತಾರೆ. 2019 ರ ಸಾಲಿನಲ್ಲಿ ಅಡಿಕೆ ಫಸಲು ಬರುತ್ತಿರಲಿಲ್ಲ. 1 ಎಕರೆ ಜಮೀನಿನಲ್ಲಿ ಅಡಿಕೆ ಬೆಳೆಯಲು ಸುಮಾರು ಎರಡರಿಂದ ಎರಡುವರೆ ಲಕ್ಷ ಖರ್ಚಾಗುತ್ತದೆ. 1 ಎಕರೆ ಜಮೀನಿನಲ್ಲಿ ಸುಮಾರು 20 ರಿಂದ 23 ಕ್ವಿಂಟಾಲ್ ಗೋವಿನ ಜೋಳ ಬೆಳೆಯುತ್ತೇವೆ. ಆ ಗೋವಿನ ಜೋಳ ಬೆಳೆಯಲು ಸುಮಾರು 20 ಸಾವಿರ ಎಕರೆಗೆ ಖರ್ಚಾಗುತ್ತದೆ. ಅದೇ ರೀತಿ ಅಡಿಕೆ ಬೆಳೆಗೆ ಸುಮಾರು 10 ರಿಂದ 15 ಸಾವಿರ ಗೊಬ್ಬರಕ್ಕೆ ಖರ್ಚಾಗುತ್ತದೆ. ಈ ಹಿಂದೆ ಉಳಿದ ಎರಡುವರೆ ಎಕರೆ ಜಮೀನಿನಲ್ಲ್ ಗೋನ ಜೋಳವನ್ನು ಬೆಳೆಯುತ್ತಿದ್ದೆವು.

2.  ಆ ಜಮೀನಿನಲ್ಲಿ ಬಂದ ಗೋವಿನ ಜೋಳವನ್ನು ನಮ್ಮ ಅಣ್ಣ ಯಾರಿಗೆ ಮಾರಾಟ ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ನಾನು ದಾವಣಗೇರಿಯಲ್ಲಿ ವ್ಯವಸಾಯ ಇಲಾಖೆಯಲ್ಲಿ ಕೋ ಆರ್ಡಿನೇಟರ್ ಆಗಿ ಕೆಲಸ ಮಾಡುತ್ತಿದ್ದೆನು. ನಾನು ಬೆಂಗಳೂರಿನಲ್ಲಿ 2010 ರಿಂದ 2019 ರವರೆಗೆ ಕೆಲಸ ಮಾಡುತ್ತಿದ್ದೆನು. ನಾನು ನನ್ನ ದೂರು ಮತ್ತು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಈ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದ ವಿಚಾರವನ್ನು ಬರೆಸಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಶೇತ್ಕರಿ ಕೆಲಸವನ್ನು ಹೊರತು ಪಡಿಸಿ ಬೇರೆ ಕೆಲಸ ಮಾಡುತ್ತಿರುವ ವಿಚಾರವನ್ನು ಬರೆಸಿರುವುದಿಲ್ಲ. ನಾನು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ವಿಚಾರವನ್ನು ಬರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.  ನಾನು ಸಿಂಡಿಕೇಟ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್ ಗಳಲ್ಲಿ ಎರಡು ಖಾತೆಗಳನ್ನು ಹೊಂದಿರುತ್ತೇನೆ. ಆ ಎರಡು ಬ್ಯಾಂಕ್ ಗಳು ವಿಲೀನಗೊಂಡಿರುತ್ತವೆ. ಆ ಬ್ಯಾಂಕ್ ಖಾತೆಗಳನ್ನು ನಾನು ಬೆಂಗಳೂರಿನಲ್ಲಿ ತೆರೆದಿರುತ್ತೇನೆ. ಆ ಎರಡು ಖಾತೆಗಳನ್ನು 2020 ನೇ ಸಾಲಿನಲ್ಲಿ ಹಾನಗಲ್ ಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ. 2019 ರಿಂದ ಈಚೆಗೆ ನನ್ನ ವ್ಯವಸಾಯ ಮೂಲಗಳಿಂದ 20 ರಿಂದ 30 ಸಾವಿರ ಆದಾಯ ಬರುತ್ತದೆ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ಆರೋಪಿ ನನಗೆ ಕಳೆದ 7 ವರ್ಷಗಳಿಂದ ಪರಿಚಯಸ್ಥ. ಆರೋಪಿ ನನಗೆ ದೂರದ ಸಂಬಂಧಿಕ ಎಂದು ಹೇಳಿದ ಕಾರಣ ನನಗೆ ಗೊತ್ತು. ಆರೋಪಿ ಬಟ್ಟೆ ವ್ಯಾಪಾರ ಮಾಡುತ್ತೇನೆಂದು ನನಗೆ ತಿಳಿಸಿದರು. ಆರೋಪಿ ಬಟ್ಟೆ ವ್ಯಾಪಾರ ಮಾಡುವುದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ನಮ್ಮ ಕುಟುಂಬಕ್ಕೆ ಪ್ರತಿ ತಿಂಗಳಿಗೆ ರೂ.5 ಸಾವಿರ ಖರ್ಚಾಗುತ್ತದೆ. ಒಂದು ವರ್ಷಕ್ಕೆ ಸುಮಾರು 60 ಸಾವಿರ ನಮ್ಮ ಕುಟುಂಬಕ್ಕೆ ಖರ್ಚಾಗುತ್ತದೆ. ನಮ್ಮ ಕುಟುಂಬಕ್ಕೆ ಆದಾಯಕ್ಕಿಂತ ಖರ್ಚು ಅಧಿಕವಾಗಿರುತ್ತದೆ ಎಂದರೆ ಸರಿ. ಆ ಕಾರಣ ನನಗೆ ಆರೋಪಿಗೆ ಸಾಲ ಕೊಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಬಿ ಪಿ ಎಲ್ ಕಾರ್ಡ ಹೊಂದಿದ್ದು ಇಲ್ಲಿ ಬಿ ಪಿ ಎಲ್ ಕಾರ್ಡ ಇರುವುದಿಲ್ಲ. ನಾನು 2011-12 ನೇ ಸಾಲಿನಲ್ಲಿ  ಬಿ ಪಿ ಎಲ್ ಕಾರ್ಡ ಹೊಂದಿದ್ದೇನು. ಆ  ಬಿ ಪಿ ಎಲ್ ಕಾರ್ಡ 2019 ರ ಸಾಲಿನವರೆಗೂ ಸಹ ಇತ್ತು. ನನಗೆ ಮದುವೆಯಾಗಿರುತ್ತದೆ. ನನಗೆ ಮೊದಲನೇ ಹೆಂಡತಿಗೆ ಎರಡು ಮಕ್ಕಳುಗಳು ಇವೆ. ಎರಡನೇ ಹೆಂಡತಿಗೆ ಯಾವುದೇ ಮಕ್ಕಳುಗಳು ಇರುವುದಿಲ್ಲ.

3.    ನಾನು ಮತ್ತು ನನ್ನ ಮೊದಲನೇ ಹೆಂಡತಿ 2019 ರವರೆಗೆ ಕೂಡಿಯೇ ಇದ್ದೆವು ಆ ನಂತರ ಕೂಡಿರುವುದಿಲ್ಲ. ಆ  ಬಿ ಪಿ ಎಲ್ ಕಾರ್ಡಗೆ ಒಟ್ಟು 28 ಕೆ ಜಿ ಅಕ್ಕಿ ಬರುತ್ತಿತ್ತು. ನಮ್ಮ ಕುಟುಂಬದಲ್ಲಿ ಅಂಗವಿಕಲರು ಹಾಗೂ ವೃದ್ದಾಪ್ಯ ವ್ಯಕ್ತಿಗಳು ಇರುವುದಿಲ್ಲ. ಯಾವುದೇ  ಬಿ ಪಿ ಎಲ್ ಕಾರ್ಡ ಹೊಂದಿರುವವರು ರೂ.20 ಸಾವಿರಕ್ಕಿಂತ ಕಡಿಮೆ ಅದಾಯ ಹೊಂದಿರುವವರಿಗೆ ಮಾತ್ರ ಕೊಡುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ ನನಗೂ ಮತ್ತು ನನ್ನ ಎರಡನೇ ಹೆಂಡತಿಗೆ  ಬಿ ಪಿ ಎಲ್ ಕಾರ್ಡ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2019 ಕ್ಕಿಂತ ಮೊದಲು ನನ್ನ ಇಬ್ಬರು ಮಕ್ಕಳುಗಳು 8 ಮತ್ತು 9 ನೇ ತರಗತಿಯಲ್ಲಿ ವಿದ್ಯಾಬ್ಯಾಸ ಮಾಡುತ್ತಿದ್ದರು. ಆ ಇಬ್ಬರು ಮಕ್ಕಳುಗಳು ನನ್ನ ಜೊತೆ ಇರುವುದಿಲ್ಲ. ಆ ಇಬ್ಬರೂ ಮಕ್ಕಳಗಳನ್ನು ಕನ್ನಡ ಮತ್ತು ಇಂಗ್ಲೀಷ ಶಾಲೆಗೆ ಸೇರಿಸಿದ್ದೆನು. ಆ ಶಾಲೆಗೆ ನನ್ನ ಹಿರಿಯ ಮಗನಿಗೆ 18 ಸಾವಿರ ಮತ್ತು ಮತ್ತೊಬ್ಬ ಮಗನಿಗೆ 9 ಸಾವಿರ ಶಾಲಾ ಶುಲ್ಕ ಇತ್ತು. ಅದಲ್ಲದೇ 1 ವರ್ಷಕ್ಕೆ ಇತರೇ ಖರ್ಚು ಸುಮಾರು 4 ಸಾವಿರದಷ್ಟು ಬರುತ್ತಿತ್ತು. ನಾನು ಬೆಂಗಳೂರಿನ ದಾಸರಹಳ್ಳಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆನು. ನಾನು ತಿಂಗಳಿಗೆ ನಾಲ್ಕುವರೆ ಸಾವಿರ ಮನೆ ಬಾಡಿಗೆ ಕೊಡುತ್ತಿದ್ದೆನು. ನನ್ನ ಮಕ್ಕಳ ಶಾಲೆ ಮನೆಯಿಂದ 1 ಕಿ ಮಿ ದೂರದಲ್ಲಿತ್ತು. ಅವರುಗಳು ಶಾಲೆಗೆ ನಡೆದುಕೊಂಡು ಹೋಗುತ್ತಿದ್ದರು. ನನಗೆ ಬೆಂಗಳೂರುನಲ್ಲಿ ಡಿ  ಡಬ್ಲು ಎಸ ಎಸ್ ಬಿ ನಲ್ಲಿ ತಿಂಗಳಿಗೆ 33 ಸಾವಿರ ಸಂಬಳ ಬರುತ್ತಿತ್ತು. ಅದರಲ್ಲಿ 3 ಸಾವಿರ ಕಳೆದು 30 ಸಾವಿರ ಸಿಗುತ್ತಿತು. ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆ ದಾಖಲೆಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನಗೆ ವ್ಯವಸಾಯವನ್ನು ಹೊರತು ಪಡಿಸಿ ಬೇರೆ ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಪಾನ್ ಕಾರ್ಡ ಮತ್ತು ಆಧಾರ ಕಾರ್ಡ ಗಳು ಇವೆ. ಆರೋಪಿ ನನ್ನಿಂದ ಬಟ್ಟೆ ವ್ಯಾಪಾರ ಮಾಡಲು ಹಣವನ್ನು ಬೆಂಗಳೂರಿನ ಪಿಣ್ಯ ದಲ್ಲಿ ಪಡೆದುಕೊಂಡರು. ನಾನು ಆರೋಪಿಗೆ ಹಣ ಕೊಟ್ಟಾಗ ನಮ್ಮ ಫ್ಯಾಕ್ಟರಿಯ ಗೋವಿಂದ ಮತ್ತು ಶಿವರಾಜ ಇದ್ದರು. ನಾನು ಆ ಹಣವನ್ನು ನಗದು ರೂಪದಲ್ಲಿಯೇ ಆರೋಪಿಗೆ ಕೊಟ್ಟೆನು. ನಮ್ಮ ಫ್ಯಾಕ್ಟರಿಯಿಂದ ನನಗೆ ಚೆಕ್ ನೀಡಿದ್ದು ಅದರ ಝುರಾಕ್ಸ ಪ್ರತಿಯನ್ನು ನಾನು ನನ್ನ ಬಳಿ ಇಟ್ಟುಕೊಂಡಿರುತ್ತೇನೆ. ಅದರೆ ಯಾವ ದಿನಾಂಕ ತಂಗಳು ಕೊಟ್ಟರು ಎಂಬುದು ನನಗೆ ಗೊತ್ತಿಲ್ಲ.

4. ನಾನು 2019 ರಲ್ಲಿಯೇ ಆ ಹಣವನ್ನು ಬ್ಯಾಂಕ್ ನಿಂದ ತೆಗೆದು ಕೊಟ್ಟೆನು. ಆದರೆ ಯಾವ ದಿನಾಂಕ ಮತ್ತು ತಿಂಗಳು ಎಂಬುದು ನನಗೆ ಗೊತ್ತಿಲ್ಲ. ಆ ಹಣವನ್ನು ಸಿಂಡಿಕೇಟ ಬ್ಯಾಂಕ್ ಮೆಜೆಸ್ಟಿಕ್ ಶಾಖೆಗೆ ಜಮಾ ಮಾಡಿದೆನು. ಆ ಖಾತೆಗೆ ಸಂಬಂಧಪಟ್ಟ ಹೊಸ ಪಾಸ್ ಪುಸ್ತಕ ನನ್ನ ಬಳಿ ಇದೆ. ಈ ಬಗ್ಗೆ ಪಾಸ್ ಪುಸ್ತಕವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ಡಿಸೆಂಬರ್–2019 ರಲ್ಲಿ ಆರೋಪಿಗೆ ರೂ. 2 ಲಕ್ಷದ 50 ಸಾವಿರ ಹಣವನ್ನು ಕೊಟ್ಟೆನು. ನಾನು 500 ರೂ. ಮುಖಬೆಲೆಯ ನೋಟುಗಳನ್ನು ಆರೋಪಿಗೆ ಕೊಟ್ಟೆನು. ನಾನು ಎಷಟು ನೋಟುಗಳನ್ನು ಕೊಟ್ಟೆನು ಎಂಬುದು ನನಗೆ ಈಗ ನೆನಪಿಲ್ಲ.

**(ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ

ಮತ್ತು ಜೆ.ಎಂ.ಎಫ್.ಸಿ, ಹಾನಗಲ್